# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಹೆಚ್.ದ್ವಾರಕನಾಥ್ ಮತ್ತು ಶ್ರೀ ಪ್ಯಾರೆ ಮಹಮ್ಮದ್ ಕುತ್ಬುದ್ದೀನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು (ಹಾಲಿ ನಿವೃತ್ತ) ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:- ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಮುಇಂ/ಪಂರಾಇಂಇ/ಸಿ-11/ತನಿಖೆ-33/2015-16 ದಿನಾಂಕ 06.04.2017.

ಪ್ರಸ್ತಾವನೆ:-

ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು 2011 ರಿಂದ 2014ನೇ ಸಾಲುಗಳಲ್ಲಿ ಯಾದಗಿರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ ನಿಯಮಗಳನ್ನು ಉಲ್ಲಂಘಿಸಿ ಸ್ವಂತ ಚೆಕ್ ಮೂಲಕ ಹಣ ಡ್ರಾ ಮಾಡಿ ಸ್ವೀಕೃತಿ ಪಡೆಯದೇ ಶಾಖಾಧಿಕಾರಿಗಳಿಗೆ ಹಣ ವಿತರಿಸಿ, ಶಾಸನ ಬದ್ಧ ಕಡಿತಗಳನ್ನು ಕಟಾಯಿಸದೇ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಲು ಕಾರಣರಾದ ಈ ಕೆಳಕಂಡ ಅಧಿಕಾರಿ / ನೌಕರರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಕೋರಿ ದೋಷಾರೋಪಣಾ ಪಟ್ಟಿ (ಅನುಬಂಧ-1 ರಿಂದ 4) ಯನ್ನು ತಯಾರಿಸಿ ಸಲ್ಲಿಸಿರುತ್ತಾರೆ:-

1. *ಶ್ರೀ ಹೆಚ್. ದ್ವಾರಕಾನಾಥ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ)*
2. *ಶ್ರೀ ಪ್ಯಾರೆ ಮಹ್ಮದ್ ಕುತ್ಬುದ್ದೀನ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ),*
3. ಶ್ರೀ ಕೆ. ಶಂಕರ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್
4. ಶ್ರೀ ಕೆ.ಭೀಮರೆಡ್ಡಿ, ಅಂದಿನ ಕಿರಿಯ ಇಂಜಿನಿಯರ್
5. ಶ್ರೀ ಬಸಯ್ಯ ಹಿರೇಮಠ, ಅಂದಿನ ಪ್ರಭಾರಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್
6. ಶ್ರೀ ಮರಿಯಪ್ಪ, ಅಂದಿನ ಕಿರಿಯ ಇಂಜಿನಿಯರ್
7. ಶ್ರೀ ನೀಲಕಂಠಪ್ಪ, ಅಂದಿನ ಕಿರಿಯ ಇಂಜಿನಿಯರ್
8. ಶ್ರೀ ಎಸ್.ನಿರಂಜನ್, ಅಂದಿನ ಕಿರಿಯ ಇಂಜಿನಿಯರ್
9. ಶ್ರೀ ಉಮೇಶ್, ಅಂದಿನ ಸಹಾಯಕ ಇಂಜಿನಿಯರ್
10. ಶ್ರೀ ಸೋಮಶೇಖರ್, ಅಂದಿನ ಕಿರಿಯ ಇಂಜಿನಿಯರ್
11. ಶ್ರೀ ಬನ್ನಪ್ಪ, ಅಂದಿನ ಕಿರಿಯ ಇಂಜಿನಿಯರ್
12. ಶ್ರೀ ಕೆ.ವಿಶ್ವನಾಥ್, ಅಂದಿನ ಸಹಾಯಕ ಇಂಜಿನಿಯರ್
13. ಶ್ರೀ ಅಯ್ಯಾಳಪ್ಪ, ಕಿರಿಯ ಇಂಜಿನಿಯರ್
14. ಶ್ರೀ ಬಸರಾಜ್, ಅಂದಿನ ಕಿರಿಯ ಇಂಜಿನಿಯರ್
15. ಶ್ರೀ ಗೋಪಾಲರೆಡ್ಡಿ, ಅಂದಿನ ಸಹಾಯಕ ಇಂಜಿನಿಯರ್
16. ಶ್ರೀ ಲಿಂಗಣ್ಣ ಪೂಜಾರಿ ಎಂ. ಅಂದಿನ ಕಿರಿಯ ಇಂಜಿನಿಯರ್
17. ಶ್ರೀ ಚಂದ್ರಶೇಖರ್ ಗುಪ್ತ, ಅಂದಿನ ಕಿರಿಯ ಇಂಜಿನಿಯರ್
18. ಶ್ರೀ ಹನಮಂತ, ಅಂದಿನ ಕಿರಿಯ ಇಂಜಿನಿಯರ್

ಮೇಲ್ಕಂಡ ಆಪಾದಿತ ಅಧಿಕಾರಿಗಳ ಪೈಕಿ ಶ್ರೀ ಹೆಚ್.ದ್ವಾರಕನಾಥ್ ಮತ್ತು ಶ್ರೀ ಪ್ಯಾರೆ ಮಹಮ್ಮದ್ ಕುತ್ಬುದ್ದೀನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು ತಮ್ಮ ಕರ್ತವ್ಯ ನಿರ್ವಹಣೆಯ ಅವಧಿಯಲ್ಲಿ ಬರಪರಿಹಾರ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವನ್ನು ಬ್ಯಾಂಕಿನಿಂದ ಸ್ವಂತ ಚೆಕ್ ಮೂಲಕ ಡ್ರಾ ಮಾಡಿ ಕಾಮಗಾರಿ ನಿರ್ವಹಿಸಿದ ಶಾಖಾಧಿಕಾರಿಗಳಿಗೆ ಸ್ವೀಕೃತಿ ಪಡೆಯದೇ ನಗದನ್ನು ವಿತರಿಸಿ ನಿಯಮಗಳನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಕಂಡು ಬಂದಿರುತ್ತದೆ. ಸದರಿಯವರುಗಳು ಸೇವೆಯಿಂದ ನಿವೃತ್ತರಾಗಿರುವುದರಿಂದ ಇವರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 ರಡಿ ಮಂಜೂರಾತಿ ನೀಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ

**ಆದೇಶ ಸಂಖ್ಯೆ ಗ್ರಾಅಪ 7 ಇಎನ್‌ಕ್ಯೂ 2014 ಬೆಂಗಳೂರು, ದಿನಾಂಕ 15.05.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡ ಸೇವೆಯಿಂದ ನಿವೃತ್ತರಾದ ಅಧಿಕಾರಿಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11 ಮತ್ತು 11ಎ ರಡಿಯಲ್ಲಿನ ವಿಧಿ ವಿಧಾನಗಳನ್ನು ಅನುಸರಿಸಿ ನಡೆಸುವ ಸಲುವಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 (2)(b)(ii) ರನ್ವಯ ಮಂಜುರಾತಿಯನ್ನು ನೀಡಿದೆ:-

1. ಶ್ರೀ ಹೆಚ್.ದ್ವಾರಕನಾಥ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಯಾದಗಿರಿ.
2. ಶ್ರೀ ಪ್ಯಾರೆ ಮಹಮ್ಮದ್ ಕುತ್ಬುದ್ದೀನ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಯಾದಗಿರಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

15/05/2017
(ಎಸ್.ರಂಗನಗೌಡ),
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.

5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ.
6. ಶ್ರೀ ಹೆಚ್.ದ್ವಾರಕನಾಥ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಯಾದಗಿರಿ. ಇವರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ ಇವರ ಮುಖಾಂತರ.
7. ಶ್ರೀ ಪ್ಯಾರೆ ಮಹಮ್ಮದ್ ಕುತ್ಬುದ್ದೀನ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಯಾದಗಿರಿ. ಇವರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ ಇವರ ಮುಖಾಂತರ.
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು–ಎ & ಸಿ)
9. ಗ್ರಾ.ಅ.ಪಂ.ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
10. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
11. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.